ಪ್ರಜಾವಾಣಿ

ಅಖಿಲ ಭಾರತ ಅಂತರ ವಾರ್ಸಿಟಿ ಕ್ರಿಕೆಟ್

# ಫೈನಲ್‌ಗೆ ಜೈನ್, ಮುಂಬೈ ವಿವಿ

**ಪ್ರಜಾವಾಣಿ ವಾರ್ತೆ**

ಮಣಿಪಾಲ: ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡವು ರೋಹಿಂಟನ್ ಬಾರಿಯ ಟ್ರೋಫಿ ಅಖಿಲ ಭಾರತ ಅಂತರ ವಲಯ ವಿ.ವಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಂಬೈ ವಿವಿ ತಂಡವನ್ನು ಎದುರಿಸಲಿದೆ. ಜೈನ್ ವಿ.ವಿಯು ಗ್ವಾಲಿಯರ್‌ನ ಜಿವಾಜಿ ವಿ.ವಿ ತಂಡವನ್ನು ಎಂಟು ವಿಕೆಟ್‌ಗಳಿಂದ ಸೋಲಿಸಿ ಫೈನಲ್ ಪ್ರವೇಶಿಸಿತು. ಐದು ಬಾರಿ ಚಾಂಪಿಯನ್ ಆಗಿದ್ದ ಮುಂಬೈ ವಿ.ವಿ ತಂಡವು ದೆಹಲಿಯ ಜಾಮಿಯಾ ಮಿಲಿಯ ಇಸ್ಲಾಮಿಯಾ ವಿ.ವಿಯನ್ನು 60 ರನ್‌ಗಳಿಂದ ಸೋಲಿಸಿ ಫೈನಲ್‌ಗೆ ಲಗ್ಗೆ ಇಟ್ಟಿತು.

ಮಣಿಪಾಲ ತಾಂತ್ರಿಕ ಸಂಸ್ಥೆ (ಎಂಐಟಿ) ಮೈದಾನದಲ್ಲಿ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಜೈನ್ ವಿ.ವಿ ತಂಡವು ಜಿವಾಜಿ ವಿ.ವಿ ತಂಡವನ್ನು ಸುಲಭದಲ್ಲಿ ಬಗ್ಗುಬಡಿಯಿತು. ಟಾಸ್ ಗೆದ್ದು ಬ್ಯಾಟಿಂಗ್ ಆರಿಸಿಕೊಂಡ ಜಿವಾಜಿ ವಿ.ವಿ 31 ರನ್ನಿಗೆ 5 ವಿಕೆಟ್ ಕಳೆದುಕೊಳ್ಳುವ ಮೂಲಕ ಆರಂಭದಲ್ಲೇ ಸಂಕಷ್ಟಕ್ಕೆ ಸಿಲುಕಿತು. ಆರನೇ ವಿಕೆಟ್‌ಗೆ ಸೊಹ್ರಾಬ್ ಧಾಲಿವಲ್ ಮತ್ತು ಪ್ರಶಾಂತ್ ಮಹ್ವಾಯ್ ಜೋಡಿಯ 47 ರನ್‌ಗಳ ಜೊತೆಯಾಟದಿಂದ ತಂಡವು ಸ್ವಲ್ಪಮಟ್ಟಿನ ಚೇತರಿಕೆ ಕಂಡಿತು. ಜಿವಾಜಿ ವಿ.ವಿ ತಂಡವು 38.2 ಓವರ್‌ಗಳಲ್ಲಿ 116ಕ್ಕೆ ಆಲೌಟ್ ಆಯಿತು.

ಗುರಿ ಬೆನ್ನತ್ತಿದ ಜೈನ್ ವಿ.ವಿ ಗೌರವ್ ಗೋಯಲ್ ಹಾಗೂ ಶಶೀಂದ್ರ ಅವರ ವಿಕೆಟ್‌ಗಳನ್ನು ಬೇಗನೆ ಕಳೆದುಕೊಂಡಿತು. ಬಳಿಕ ಕ್ರೀಸಿಗಿಳಿದ ಸಿದ್ಧಾರ್ಥ್ ಕೆ.ವಿ. (53) ಹಾಗೂ ಸಮರ್ಥ್ ರವಿ ಕುಮಾರ್ (41) ವಿಕೆಟ್ ಒಪ್ಪಿಸದೆಯೇ ತಂಡವನ್ನು ಗೆಲುವಿನ ದಡ ಸೇರಿಸಿದರು.

ಎರಡು ದಿನಗಳ ಫೈನಲ್ ಪಂದ್ಯ ಮಣಿಪಾಲ ವಿ.ವಿ ಮೈದಾನದಲ್ಲಿ ಶನಿವಾರ ಆರಂಭವಾಗಲಿದೆ. ಮುಂಬೈ ವಿ.ವಿ ಮತ್ತು ಜೈನ್ ವಿ.ವಿ ತಂಡಗಳು ಕಳೆದ ಬಾರಿ ಟೂರ್ನಿಯ ಮೂರನೇ ಸ್ಥಾನಕ್ಕಾಗಿ ಸೆಣಸಾಟ ನಡೆಸಿದ್ದವು. ಮುಂಬೈ ವಿ.ವಿ ತಂಡಕ್ಕೆ ಜೈನ್ ವಿ.ವಿ ಶರಣಾಗಿತ್ತು. ಜೈನ್ ವಿ.ವಿ ಕಳೆದ ವರ್ಷದ ಸೆಮಿಫೈನಲ್‌ನಲ್ಲಿ ಅಮೃತಸರದ ಗುರುನಾನಕ್ ವಿ.ವಿ ವಿರುದ್ಧ ಸೋತಿತ್ತು.

ಸ್ಕೋರುಗಳು: ಎಂಐಟಿ ಮೈದಾನ: ಜಿವಾಜಿ ವಿ.ವಿ ಗ್ವಾಲಿಯರ್ 38.2 ಓವರ್‌ಗಳಲ್ಲಿ 116ಕ್ಕೆ ಆಲೌಟ್ (ಸೊಹ್ರಾಬ್ ಧಾಲಿವಲ್ 35, ಪ್ರಶಾಂತ್ ಮಹ್ವಾಯ್ 38. ಸಿ.ಎ.ಕಾರ್ತಿಕ್ 22ಕ್ಕೆ 2, ಶಶೀಂದ್ರ 16ಕ್ಕೆ 3, ಡೇನಿಯಲ್ ಸಿಕ್ವೇರಾ 20ಕ್ಕೆ 2).

ಜೈನ್ ವಿ.ವಿ ಬೆಂಗಳೂರು 2 ವಿಕೆಟ್‌ಗೆ 117 (ಸಿದ್ಧಾರ್ಥ್ ಕೆ.ವಿ. ಔಟಾಗದೆ 56, ಸಮರ್ಥ್ ರವಿ ಔಟಾಗದೆ 43).

ಮಣಿಪಾಲ ವಿ.ವಿ ಮೈದಾನ: ಮುಂಬೈ ವಿ.ವಿ 67.5 ಓವರ್‌ಗಳಲ್ಲಿ 217ಕ್ಕೆ ಆಲೌಟ್ (ಸಾಗರ್ ಗೋರಿವಲ್ ಔಟಾಗದೆ 43, ದಾಭೋಳ್ಕರ್ ಪ್ರತೀಕ್ 31. ಅಭಯ್ ನೇಗಿ 61ಕ್ಕೆ 5, ಆಶಿಶ್ ಚೋಪ್ರಾ 34ಕ್ಕೆ 3).

ಜಾಮಿಯಾ ಮಿಲಿಯ ಇಸ್ಲಾಮಿಯ ವಿ.ವಿ ದೆಹಲಿ 64 ಓವರ್‌ಗಳಲ್ಲಿ 157ಕ್ಕೆ ಆಲೌಟ್ (ಅಮಿತ್ ವರ್ಮ 23, ಶಿವೇಂದರ್ ಪಾಲ್ 20, ಸುರಿಂದರ್ ಧೈಯ್ಯ 27. ದಾಭೋಳ್ಕರ್ ಪ್ರತೀಕ್ 35ಕ್ಕೆ 3, ಪಂಕಜ್ ಜೈಸ್ವಾಲ್ 30ಕ್ಕೆ 2, ವಿನಿತ್ ಧುಲಾಪ್ 27ಕ್ಕೆ 4).